**<u>ಪ್ರಮಾಣವಚನ ಬೋಧಿಸಿದ ದಿನಾಂಕ 29.10.2022</u>**

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ ವಿ ಆರ್ ವಕೀಲರಿಂದಃ</u>

1. ನನಗೆ 3 ಜನ ಮಕ್ಕಳು. ಚಾಸಾ 1 ನನಗೆ 3 ನೇ ಮಗಳು. ನಮಗೆ 3 ವರೆ - 4 ಎಕರೆ ಜಮೀನು ಇದೆ. ಚಾಸಾ 1 ರವರು ಅತ್ತೆ, ನಾದಿನಿ, ಗಂಡನ ವಿರುದ್ಧ ಮಳವಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಆಸ್ತಿಯಲ್ಲಿ ಭಾಗ ಕೇಳಿ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಚಾಸಾ 1 ರವರು 1 ನೇ ಆರೋಪಿ ವಿರುದ್ಧ ಜೀವನಾಂಶಕ್ಕಾಗಿ ಕೇಸು ಹಾಕಿದ್ದಾಳೆ ಎಂದರೆ ಸರಿ. ಎರಡು ಕೇಸುಗಳು ಇನ್ನು ನಡೆಯುತ್ತಿದೆ. ನೆಲಮಾಕನಹಳ್ಳಿಯಿಂದ ನಮ್ಮ ಊರಿಗೆ 15 ಕಿಲೋ ಮೀಟರ್ ಆಗಬಹುದು. ಬಾಲಾಜಿ ಸಮುದಾಯ ಭವನಕ್ಕೂ ನೆಲಮಾಕನಹಳ್ಳಿಗೂ 6 – 7 ಕಿಲೋ ಮೀಟರ್ ಇರಬಹುದು. ನಮ್ಮ ಗ್ರಾಮಕ್ಕೂ ಕೆಂಚನದೊಡ್ಡಿ ಗ್ರಾಮಕ್ಕೂ 25 ಕಿಲೋ ಮೀಟರ್ ದೂರ ಆಗುತ್ತದೆ.

2. ನನ್ನ ಮಗಳ ಮದುವೆಯಾದಗಿನಿಂದ ಈ ಹಿಂದೆ ಆರೋಪಿತರು ವರದಕ್ಷಿಣೆ ಕಿರುಕುಳ ಕೊಡುತ್ತಿದ್ದಾರೆ ಎಂದು ಯಾವುದೇ ಕೇಸನ್ನು ಹಾಕಿಲ್ಲ. ಠಾಣೆಗೆ ದೂರು ಕೊಡಲು ತೊಂದರೆ ಇತ್ತೇ ಎಂದರೆ ಗ್ರಾಮದಲ್ಲಿ ತಿಳಿಸಬೇಕು ಎಂದು ದೂರನ್ನು ಕೊಡಲು ಹೋಗಿರಲಿಲ್ಲ ಹಾಗೂ ಮಗಳಿಗೆ ಬುದ್ದಿ ಹೇಳಿದ್ದೆವು.

3. ಮದುವೆ ಸಮಯದಲ್ಲಿ ನನ್ನ ಮಗಳಿಗೆ ಹಾಗೂ ಆರೋಪಿತರಿಗೆ ಒಡವೆಗಳನ್ನು ಕೊಟ್ಟ ಬಗ್ಗೆ ಎಲ್ಲಿ ಮಾಡಿಸಲಾಗಿದೆ ಎಂದರೆ ನನ್ನ ತಂಗಿ ಮಾಡಿಸಿದ್ದು ರಶೀದಿ ಅವರ ಬಳಿ ಇದೆ. ರಶೀದಿ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಈ ಸಂಬಂಧ ಪೊಲೀಸರು ರಶೀದಿಯನ್ನು ವಶಪಡಿಸಿಕೊಂಡಿರಲಿಲ್ಲ. ನನ್ನ ಮೊಮ್ಮಗ ಮೊದಲ ಬಾರಿಗೆ ಆರೋಪಿತರೇ ಸೇರಿಸಿದ್ದರು. ನಂತರ 1 ನೇ ತರಗತಿಯಿಂದ ನಾವು ಸೇರಿಸಿರುತ್ತೇವೆ. ವರದಕ್ಷಿಣೆ, ಒಡವೆ ಹಾಗೂ ಹಣವನ್ನು ನನ್ನ ತಂಗಿ ಮಾವನ ಸಮಕ್ಷಮ ಆರೋಪಿತರಿಗೆ ಕೊಟ್ಟಿದ್ದೆ.

4. ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳ ಮನೆಗೆ ಹೋದ ಮೇಲೆ ------------------------------------- ಮನೆಗೆ ಕಳುಹಿಸುತ್ತಿದ್ದರು ಎಂದು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿದ್ದೇನೆ. ಆಗ ನಾವು ನಿನ್ನ ತಂದೆ ತಾಯಿಗೆ ತಿಳಿಸು ನಾವು

ಮನೆಗೆ ಕರೆದುಕೊಂಡು ಬರುತ್ತೇವೆ ಎಂದು ತಿಳಿಸಿದ್ದೆವು ಎಂದು ಪೊಲೀಸರ ಮುಂದೆ ಹೇಳಿರುತ್ತೇನೋ ಇಲ್ಲವೋ ಜ್ಞಾಪಕವಿಲ್ಲ.

5. ನನ್ನ ಮುಖ್ಯ ವಿಚಾರಣೆಯಲ್ಲಿ ನಾವು ಮನೆಗೆ ಹೋದಾಗ ಮನೆಯಲ್ಲಿ –----------------------2 ನೇ ಆರೋಪಿ ಚಾಸಾ 20 ಮತ್ತು 21 ಇದ್ದರು ಎಂದು ಪೊಲೀಸರ ಮುಂದೆ ಹೇಳಿದ್ದೇನೆ.

6. ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ಅಳಿಯ 1 ನೇ ಆರೋಪಿ ------------------- ಮನೆಯ ಹಿಂದಿನ ಬಾಗಿಲಿನಿಂದ ಓಡಿ ಹೋದರು ಎಂದು ಪೊಲೀಸರ ಮುಂದೆ ಹೇಳಿದ್ದೇನೆ.

7. ನನ್ನ ಮಗಳನ್ನು ಕಳುಹಿಸುತ್ತಿದ್ದ ಬಗ್ಗೆ 4 – 5 ಬಾರಿ ಪಂಚಾಯಿತಿ ಮಾಡಿರುತ್ತೇವೆ. ನಂತರ ಹಣ ಒಡವೆಯನ್ನು ಆರೋಪಿತರಿಗೆ ಕೊಟ್ಟಿರಲಿಲ್ಲ. 17 ನೇ ತಾರೀಖಿನಂದು 1 ನೇ ಆರೋಪಿ ಕರೆದಾಗ ನಾವು ಗಲಾಟೆಯಾಗಿದೆ ಪಂಚಾಯಿತಿ ಮಾಡಿದವರನ್ನು ಕರೆಯಿಸಿ ನಾವು ಕಳುಹಿಸುತ್ತೇವೆ ಎಂದು ಹೇಳಿದ್ದೆವು. ನಮ್ಮ ತಂದೆ ಮನೆಯ ಪಕ್ಕದವರಿಗೆ ವಿಷಯ ತಿಳಿಸಿದ್ದೆವು. 1 ನೇ ಆರೋಪಿ ಮಗಳನ್ನು ಕಳುಹಿಸಿಕೊಡಿ ಎಂದು ಹೇಳಿದ ಬಗ್ಗೆ ನ್ಯಾಯ ಪಂಚಾಯಿತಿ ಮಾಡಿದ್ದವರಿಗೆ ವಿಷಯ ತಿಳಿಸಲಿಲ್ಲ.

**ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)
C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.

**ಪ್ರಮಾಣವಚನ ಬೋಧಿಸಿದ ದಿನಾಂಕ 17.04.2023**

ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ ವಿ ಆರ್ ವಕೀಲರಿಂದಃ

8. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಮಧ್ಯಾಹ್ನ 12.00 ಗಂಟೆ ಸಮಯಕ್ಕೆ ಮನೆಗೆ ಹೋದೆವು ಎಂದು ಹೇಳಿದ್ದು ಈ ವಿಷಯ ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ. ನಾವು ಪ್ರಾ ಸಾ 1 ಮತ್ತು ಆಕೆಯ ಮಗನನ್ನು ಮನೆಯ ಒಳಗೆ ಕಳುಹಿಸಿ ನಾವು ಹೊರಗಡೆ ನಿಂತಿದ್ದೆವು ಎಂದು ಪೊಲೀಸರ ಮುಂದೆ ಹೇಳಿಲ್ಲ. 2ನೇ ಆರೋಪಿ ಗಲಾಟೆ ಪ್ರಾರಂಭ ಮಾಡಿ ಆಕೆಯ ಮಗ 1ನೇ ಆರೋಪಿಗೆ ಪೋನ್ ಮಾಡಿ ಕರೆಸಿಕೊಂಡಳು ಎಂದು ಪೊಲೀಸರ ಮುಂದೆ ಹೇಳಿದ್ದೇನೆ.

9. ಹಿಂದಿನ ದಿವಸ ನನ್ನ ಅಳಿಯ ಬಂದು ನ್ಯಾಯ ಪಂಚಾಯಿತಿಗೆ ಕರೆದಾಗ ನ್ಯಾಯ ಪಂಚಾಯಿತಿದಾರರಿಗೆ ಕಳಹಿಸಬಹುದೇ ಇಲ್ಲವೇ ಎಂದು ನಾನು ಹೇಳಿಲ್ಲ. ಬೀಗರ ಮನೆಗೆ ಹೋಗಿ ನನ್ನ ಅಳಿಯನಿಗೆ ಮಗಳನ್ನು ಕರೆ ತಂದಿದ್ದೇವೆ ಎಂದು ನಾನು ಹೇಳಿಲ್ಲ. ಮುಂದುವರಿದು ಮನೆಯ ಒಳಗೆ ಹೋದೆವು. ನನ್ನ ಮಗಳ ಮದುವೆಯಾಗಿ ಘಟನೆ ವೇಳೆಯಲ್ಲಿ 7 ವರ್ಷಕ್ಕೆ 10 ದಿವಸ ಬಾಕಿ ಇತ್ತು. ಆಗಾಗಿ ವರದಕ್ಷಿಣೆ ಕಾನೂನನ್ನು ದುರಪಯೋಗಪಡಿಸಿಕೊಂಡು ಯಾವುದೇ ಘಟನೆ ನಡೆಯದೆ ಇದ್ದರೂ ಕೂಡ ಸುಳ್ಳು ದೂರನ್ನು ನನ್ನ ಮಗಳ ಮುಖಾಂತರ ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಯಾವತ್ತು ನಮ್ಮಿಂದ ಒಡವೆ, ಹಣ ವರದಕ್ಷಿಣೆಗಾಗಿ ಕೇಳಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳಿಗೆ ಹೊಡೆದು ಬಡಿದು ನಮ್ಮ ಮನೆಗೆ ಕಳುಹಿಸಿರಲಿಲ್ಲ ಎಂದರೆ ಸರಿಯಲ್ಲ.

10. ನನ್ನ ಮಗಳು 1ನೇ ಆರೋಪಿಯನ್ನು ಮಳವಳ್ಳಿ ಬೇರೆ ಮನೆ ಮಾಡಿ ಎಂದು ಹಿಂಸೆ ಕೊಡುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳು ಮಗುವನ್ನು ಸಿಟಿ ಶಾಲೆಯಲ್ಲಿ ಓದಿಸಬೇಕು ಎಂದು ಆರೋಪಿಗೆ ಹಿಂಸೆ ಕೊಡುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳು ಸ್ವತಃ ನಮ್ಮ ಮನೆಗೆ ಸೇರಿಕೊಂಡಿದ್ದಳು, ಆರೋಪಿತರು ಆಕೆಗೆ ಯಾವುದೇ ಹಿಂಸೆ

ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಕಂಡಿಕೆ 2 ರಲ್ಲಿ ತಿಳಿಸಿರುವ ಹಾಗೆ ಹಣ, ಒಡವೆ ಕೊಡುವಷ್ಟು ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರೇ ನನ್ನ ಮಗಳಿಗೆ ಒಡವೆ ಹಾಕಿ ಚೌಲ್ಟ್ರಿ ಅವರೇ ಮಾಡಿ ಖರ್ಚು ಮಾಡಿ ಮದುವೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳಿಗಾಗಲೀ ನಮಗಾಗಲೀ ಹೆಚ್ಚಿನ ವರದಕ್ಷಿಣೆ ಕೇಳಿರಲಿಲ್ಲ ಎಂದರೆ ಸರಿಯಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಪಂಚಾಯಿತಿ ನಡೆದಿಲ್ಲ ಎಂದರೆ ಸರಿಯಲ್ಲ. ತಾ 17.11.2016 ರಂದು ನನ್ನ ಅಳಿಯ ಯಾವತ್ತು ಮನೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. 18 ನೇ ತಾರೀಖಿನಂದು ನಾನು ಮತ್ತು ನನ್ನ ಮಗಳು ಆರೋಪಿತರ ಮನೆಗೆ ಹೋಗಿದ್ದೆವು ಎಂದು ಸುಳ್ಳು ಸೃಷ್ಟನೆ ಮಾಡಿಕೊಂಡು ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಮಗಳು ಅಳಿಯ ಆ ದಿವಸ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತು ನನ್ನ ಮಗಳಿಗೆ ಸಿಮೆಎಣ್ಣೆ ಸುರಿದಿದ್ದು ನಾವು ಆಕೆಯನ್ನು ಬಿಡಿಸಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೇ ನಮ್ಮ ಮಗಳ ಬಟ್ಟೆಯ ಮೇಲೆ ಸೀಮೆಎಣ್ಣೆ ಹಾಕಿ ಕೇಸಿಗಾಗಿ ಮುದ್ದೆಮಾಲನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮಳವಳ್ಳಿ ನ್ಯಾಯಾಲಯದಲ್ಲಿ ನನ್ನ ಮಗಳು ಪಾಲು ಕೇಳಿ ಜೀವನಾಂಶಕ್ಕೆ ಹಾಕಿರುವ ಕೇಸಿಗೆ ತೊಂದರೆಯಾಗುತ್ತದೆ ಎಂಬ ದೃಷ್ಟಿಯಿಂದ ಯಾವುದೇ ಘಟನೆ ನಡೆಯದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಹಲ್ಲೆಯ ಹಿನ್ನಲೆಯಲ್ಲಿ ನನ್ನ ಮಗಳು ಆಸ್ಪತ್ರೆಯಲ್ಲಿ ಸೇರಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಆಸ್ತಿಯಲ್ಲಿ ಭಾಗಾಂಶ ಕೊಡಲಿಲ್ಲ, ಮಳವಳ್ಳಿಯಲ್ಲಿ ಪ್ರತ್ಯೇಕ ಮನೆ ಮಾಡಲಿಲ್ಲ ಎಂಬ ದ್ವೇಷ ಹಿಡಿದು ಆರೋಪಿತರಿಗೆ ಶಿಕ್ಷೆಯಾಗಲಿ ಎಂಬ ದೃಷ್ಟಿಯಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)
C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.